ಸಿದ್ದಲಿಂಗಯ್ಯ ಅವರ 'ಮತಾಂತರ' ಕತೆ ಮುನ್ನೆಲೆಗೆ ತರುವ ಪ್ರಶ್ನೆಗಳು

ಅಮರೇಂದ್ರ ಶೆಟ್ಟಿ ಆರ್.

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ವಿಜಯನಗರ, ಬೆಂಗಳೂರು.

DOI: https://doi.org/10.5281/zenodo.18816561

ABSTRACT:

ಸಿದ್ದಲಿಂಗಯ್ಯನವರ ಏಕೈಕ ಕತೆ 'ಮತಾಂತರ'ವು ಗ್ರಾಮೀಣ ಭಾರತದಲ್ಲಿ ಆಳವಾಗಿ ಬೇರುಬಿಟ್ಟಿರುವ ಜಾತಿ ತಾರತಮ್ಯ, ಅಸ್ಪೃಶ್ಯತೆ ಮತ್ತು ದಲಿತರ ದೈನಂದಿನ ಸಂಕಟಗಳನ್ನು ತೀಕ್ಷ್ಣವಾಗಿ ಅನಾವರಣಗೊಳಿಸುತ್ತದೆ. ಹಳ್ಳಿಯ ಕ್ರೌರ್ಯದಿಂದ ಪಾರಾಗಲು ಪಟ್ಟಣ ಸೇರುವ ದಲಿತ ಯುವಕರು ಅಲ್ಲಿಯೂ ಜಾತಿಯ ನೆರಳಿಗೆ ಸಿಲುಕುವ ವಾಸ್ತವವನ್ನು ಕತೆಯು ಮಾರ್ಮಿಕವಾಗಿ ಕಟ್ಟಿಕೊಡುತ್ತದೆ. ದೇವಸ್ಥಾನ ಪ್ರವೇಶ ಮತ್ತು ಕುಡಿಯುವ ನೀರಿನ ಹಕ್ಕಿನಿಂದ ವಂಚಿತರಾದ ದಲಿತರು, ಜಾತಿಯ ಅವಮಾನಗಳಿಂದ ಮುಕ್ತಿ ಪಡೆಯಲು ಕ್ರಿಶ್ಚಿಯನ್ ಹಾಗೂ ಇಸ್ಲಾಂ ಧರ್ಮಗಳಿಗೆ ಮತಾಂತರಗೊಳ್ಳುವ ಪ್ರಕ್ರಿಯೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಮತಾಂತರಗೊಂಡರೂ ಅವರ ಮೂಲ ಜಾತಿಯ ಗುರುತು ಬೆಂಬಿಡದೆ ಕಾಡುವ ದುರಂತವನ್ನು ಕತೆ ಹೇಳುತ್ತದೆ. ಗಾಂಧೀಜಿಯವರ ಆದರ್ಶವಾದಿ ದೃಷ್ಟಿಕೋನಕ್ಕಿಂತ, ಹಳ್ಳಿಗಳ ಕ್ರೌರ್ಯ ಮತ್ತು ಮತಾಂತರದ ಮಿತಿಗಳ ಕುರಿತಾದ ಅಂಬೇಡ್ಕರ್ ಅವರ ವಾಸ್ತವಿಕ ನಿಲುವೇ ಭಾರತೀಯ ಸಮಾಜವನ್ನು ಅರ್ಥೈಸಲು ಹೆಚ್ಚು ಪ್ರಸ್ತುತ ಎಂಬುದನ್ನು ಮಂಡಿಸಲಾಗಿದೆ.

KEYWORDS:

ಮತಾಂತರ, ಜಾತಿ ತಾರತಮ್ಯ, ಅಸ್ಪೃಶ್ಯತೆ, ದಲಿತ ಸಂವೇದನೆ, ಗ್ರಾಮೀಣ ವಾಸ್ತವ.

ಸಿದ್ದಲಿಂಗಯ್ಯನವರು ಕಾವ್ಯದ ಮೂಲಕವೇ ಹೆಚ್ಚು ಪರಿಚಿತರು. ಅವರು ಬರೆದಿರುವುದು 'ಮತಾಂತರ' ಎನ್ನುವ ಒಂದೇ ಒಂದು ಕತೆ. ಸಿದ್ದಲಿಂಗಯ್ಯ ಒಳ್ಳೆಯ ಗದ್ಯ ಬರಹಗಾರರು. ಅವರ ಆತ್ಮಕತೆ 'ಊರುಕೇರಿ' ಹಲವು ಅನುಭವ ಕಥನಗಳ ಗುಚ್ಛ, ಆತ್ಮಕತೆ. ಅಲ್ಲಿನ ಕಥನಗಳು ವ್ಯಕ್ತಿಗತ ಅನುಭವದ ಎಲ್ಲೆಗಳನ್ನು ದಾಟಲು ಸದಾ ಹವಣಿಸುತ್ತವೆ. ಊರುಕೇರಿಯ ಕಳಚಿಕೊಂಡ ಭಾಗದಂತೆ ಕಾಣುವ 'ಮತಾಂತರ' ಕತೆ ತನ್ನ ಕಾಲದ ಸಾಮಾಜಿಕ, ಧಾರ್ಮಿಕ, ರಾಜಕೀಯ ಒಳಸುಳಿಗಳನ್ನು ಸೃಜನಶೀಲ ನೆಲೆಯಲ್ಲಿ ದಾಖಲಿಸುವ, ಅದನ್ನು ಭೂತ–ವರ್ತಮಾನ–ಭವಿಷ್ಯಗಳ ತಕ್ಕಡಿಯಲ್ಲಿಟ್ಟು ನೋಡಲು ಒತ್ತಾಯಿಸುವ ಕತೆ.

'ಮತಾಂತರ' ಕತೆ ವಸ್ತು, ನಿರೂಪಣಾಕ್ರಮ, ಮಂಡಿಸಲೆತ್ನಿಸುವ ಸಿದ್ಧಾಂತ,

ಬಳಸುವ ಧ್ವನಿಪೂರ್ಣ ಭಾಷೆಯ ಕಾರಣದಿಂದ ಗಮನ ಸೆಳೆಯುತ್ತದೆ. ಕನ್ನಡದ ಬಹಳಷ್ಟು ಕತೆಗಳಲ್ಲಿ ಧರ್ಮ, ಜಾತಿ ಮತ್ತು ವರ್ಗ ಸಂಬಂಧಿತ ಪ್ರಶ್ನೆಗಳನ್ನು ಚರ್ಚಿಗೊಡ್ಡಲಾಗಿದೆ. ಆದರೆ ಮತಾಂತರ 'ಕತೆ' ಮುನ್ನೆಲೆಗೆ ತರುವ ಪ್ರಶ್ನೆಗಳು ತಾತ್ವಿಕ ನೆಲೆಯಲ್ಲಿ ಹೆಚ್ಚು ಆಳವಾಗಿರುವುದರಿಂದ ಅದು ಇತರ ಕತೆಗಳಿಗಿಂತ ಭಿನ್ನ. ಹಾಗೆಯೇ ಸಿದ್ದಲಿಂಗಯ್ಯನವರ ಬರಹದ ಎಂದಿನ ಶೈಲಿ ಇಲ್ಲಿಲ್ಲ. ಬದಲಾಗಿ ಪರೀಕ್ಷಕ ನೋಟ, ವ್ಯಂಗ್ಯ, ವಿಡಂಬನೆ, ಆಕ್ರೋಶಗಳು ಕತೆಯುದ್ದಕ್ಕೂ ಹರಿಯುತ್ತವೆ.

ಕತೆಯ ನಿರೂಪಕ ದಲಿತ ಸಮುದಾಯದವನು ಹಳ್ಳಿಯಿಂದ ಪಟ್ಟಣಕ್ಕೆ ಬಂದು ನೆಲೆಸಿದ್ದಾನೆ. ತನ್ನ ಹಳ್ಳಿಗೆ ಹೋಗಲು ಅವನಿಗೆ ಸುತರಾಂ ಮನಸ್ಸಿಲ್ಲ. ಹಳ್ಳಿಯ ಜಾತಿ ತರತಮ ವ್ಯವಸ್ಥೆ ದಿಗಿಲು ಹುಟ್ಟಿಸುತ್ತದೆ. ಹಾಗಾಗಿ ಜಾತಿಯ ಗುರುತುಗಳನ್ನು ಬಹಿರಂಗಪಡಿಸುವ ಅವಶ್ಯಕತೆಯಿಲ್ಲದೆ ಮುಕ್ತವಾಗಿ ಬದುಕಲು ಅವಕಾಶ ಕಲ್ಪಿಸುವ ಪಟ್ಟಣ ಅಥವಾ ಬೆಂಗಳೂರಿನ ಬದುಕು ಅವನಿಗೆ ಪ್ರಿಯವಾದುದು.

ನಿರೂಪಕನ ಗೆಳೆಯ ರಮೇಶನೂ ದಲಿತನೇ. ಹಳ್ಳಿಯಿಂದ ಬೆಂಗಳೂರಿಗೆ ಬಂದು ಯಾವುದೋ ಸಣ್ಣ ಸರ್ಕಾರಿ ಉದ್ಯೋಗ ಹಿಡಿದು ಜೀವನ ಕಟ್ಟಿಕೊಳ್ಳುತ್ತಿದ್ದಾನೆ. ದಲಿತರಿಗೆ ಬಾಡಿಗೆ ಮನೆ ಸಿಗುವುದಿಲ್ಲ ಎಂದು ತಾನು ದಲಿತನೆನ್ನುವುದನ್ನು ಮರೆಮಾಚಿ ಒಬ್ಬ ಶೆಟ್ಟಿಯ ಮನೆಯಲ್ಲಿ ಬಾಡಿಗೆಗಿದ್ದಾನೆ. ರಮೇಶನ ನಿಜವಾದ ಹೆಸರು ಚಿಕ್ಕತಿಮ್ಮಯ್ಯ. ಆದರೆ ಹೆಸರಿನ ಮೂಲಕವೂ ತನ್ನ ಜಾತಿ ಪತ್ತೆಯಾಗಬಹುದೆಂದು 'ರಮೇಶ್' ಎಂದು ಹೆಸರು ಬದಲಾಯಿಸಿಕೊಂಡಿದ್ದಾನೆ. ಒಮ್ಮೆ ಅವನನ್ನು ಕಾಣಲೆಂದು ಅವನು ಮನೆಯಲ್ಲಿಲ್ಲದ ವೇಳೆಯಲ್ಲಿ ಅವನ ಚಿಕ್ಕಪ್ಪ ಹಳ್ಳಿಯಿಂದ ಬರುತ್ತಾನೆ. ಆತನ ಮಾತಿನ ಧಾಟಿ, ವೇಷಭೂಷಣ ಮುಂತಾದವುಗಳ ಬಗ್ಗೆ ಅನುಮಾನಗೊಂಡ ಮನೆಯೊಡತಿ ಮುಗ್ಧನಾದ ಆತನನ್ನು ನಯವಾಗಿ ಮಾತನಾಡಿಸಿ ರಮೇಶ 'ಹೊಲೆಯ' ಎನ್ನುವುದನ್ನು ಪತ್ತೆ ಹಚ್ಚುತ್ತಾಳೆ. ಮಾರನೇ ದಿನದಿಂದಲೇ ರಮೇಶನನ್ನು ಮನೆ ಖಾಲಿ ಮಾಡಿಸಲು ಮಾಲೀಕನಾದ ಶೆಟ್ಟಿ ಬಗೆಬಗೆಯ ತಂತ್ರಗಳನ್ನು ಪ್ರಯೋಗಿಸಲಾರಂಭಿಸುತ್ತಾನೆ. ಅವುಗಳಲ್ಲಿ ಬೆದರಿಕೆ, ಜಾತಿ ನಿಂದನೆ, ಆಹಾರದ ಕುರಿತ ಅವಹೇಳನ ಮುಂತಾದವುಗಳೆಲ್ಲ ಸೇರಿರುತ್ತವೆ.

ಬೆಂಗಳೂರಿನಲ್ಲಿಯೇ ಇದ್ದರೂ ಕೊಳಚೆ ಪ್ರದೇಶದಲ್ಲಿ ತನ್ನಂತವರ ನಡುವೆಯೇ ವಾಸವಿದ್ದ ನಿರೂಪಕನಿಗೆ ಪೇಟೆಯಲ್ಲಿಯೂ ಇರುವ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಯ ಬಗೆಗೆ ಅಷ್ಟೊಂದು ತಿಳಿದಿರಲಿಲ್ಲ. ಅಂತಹ ಸ್ಥಿತಿಯಲ್ಲಿ ರಮೇಶನ ಒತ್ತಾಯಕ್ಕೆ ಮಣಿದು ನಿರೂಪಕ ರಮೇಶನ ಹಳ್ಳಿಗೆ ಅವನೊಂದಿಗೆ ಹೋಗುತ್ತಾನೆ. ಆ ಊರು ಎಲ್ಲ ಊರುಗಳಂತೆಯೇ ಇದೆ. ಊರಾಚೆಗೆ ಹೊಲೆಗೇರಿಯೂ ಇದೆ. ಹೊಲೆಯರಿಗೆ ದೇವಸ್ಥಾನಕ್ಕೆ, ಹೋಟೆಲಿಗೆ, ಸವರ್ಣೀಯರ ಮನೆಗೆ ಪ್ರವೇಶ– ಇವು ಯಾವುವೂ ಅಲ್ಲಿ ಇರಲಿಲ್ಲ. ಊರಿನಲ್ಲಿ ಎರಡು ಬಾವಿ ಇವೆ. ದಲಿತರಿಗೊಂದು, ಸವರ್ಣೀಯರಿಗೆ ಹಾಗೂ ಮುಸಲ್ಮಾನರಿಗೆ ಸೇರಿ ಮತ್ತೊಂದು. ಹಿಂದೂ ಸವರ್ಣೀಯರು ಮುಸಲ್ಮಾನರನ್ನು ಬೇಕಾದರೆ ಒಪ್ಪಬಲ್ಲರು. ಆದರೆ ತಮ್ಮದೇ

ಧರ್ಮದ ದಲಿತರನ್ನು ಹತ್ತಿರಕ್ಕೂ ಬಿಟ್ಟುಕೊಳ್ಳಲಾರರು. ಸಾಲದೆನ್ನುವಂತೆ ತಮ್ಮ ಧರ್ಮದ ಅಸ್ಪೃಶ್ಯತೆಯ ಸೋಂಕನ್ನು ಅನ್ಯಧರ್ಮೀಯರಿಗೂ ಹಬ್ಬಿಸಿ ಅವರೂ ದಲಿತರನ್ನು ಕಾಡುವಂತೆ ಮಾಡಬಲ್ಲರು.

ಊರಿನ ಸವರ್ಣೀಯರ ಬಾವಿಯಲ್ಲಿ ಉಪ್ಪುನೀರು. ದಲಿತರ ಬಾವಿಯಲ್ಲಿ ಸಿಹಿನೀರು. ನಾಲ್ಕೇ ಕುಟುಂಬಗಳಿರುವ ದಲಿತರ ಬಾವಿಯಲ್ಲಿ ಸದಾ ಕಾಲ ತುಂಬಿ ತುಳುಕುವ ನೀರು. ಊರಿನ ಅತಿ ಹೆಚ್ಚು ಜನ ಬಳಸುವ ಉಪ್ಪುನೀರಿನ ಬಾವಿಯಲ್ಲಿ ಸದಾ ನೀರಿನ ಕೊರತೆ. ಸಿಹಿನೀರಿನ ಆಸೆ ಸವರ್ಣೀಯರಿಗೆ ಇದ್ದರೂ ಅದು ದಲಿತರ ಬಾವಿ ಎನ್ನುವ ಕಾರಣ ಅವರನ್ನು ತಡೆಯುತ್ತಿದೆ. ಮೈಲುಗಟ್ಟಲೆ ದೂರದಿಂದ ಬೇರೊಂದು ಕಡೆಯಿಂದ ಕುಡಿಯಲು ಸಿಹಿನೀರು ತರುತ್ತಿದ್ದಾರೆ. ಆದರೂ ತಮ್ಮೂರಲ್ಲೇ ಇರುವ ಬಾವಿಯ ಸಿಹಿನೀರಿನ ಆಸೆ ನಿಯಂತ್ರಿಸಲಾಗದೆ ಕೆಲವರು ನಡುರಾತ್ರಿಯಲ್ಲಿ ದಲಿತರ ಸಿಹಿನೀರಿನ ಬಾವಿಯಿಂದ ನೀರು ಸೇದಿಕೊಂಡು ಹೋಗಲು ಬಂದು ದಲಿತರಿಗೆ ಸಿಕ್ಕಿಹಾಕಿಕೊಂಡು ಹಗ್ಗ, ಬಿಂದಿಗೆ ಎಲ್ಲವನ್ನೂ ಅಲ್ಲಿಯೇ ಬಿಟ್ಟು ಓಡಿಹೋಗಿ ಮುಖಭಂಗ ಅನುಭವಿಸಿದ್ದೂ ಆಗಿದೆ.

ಹೀಗೆ ಎಲ್ಲ ಬಗೆಯ ತಾರತಮ್ಯಗಳಿಂದ ಕೂಡಿದ ಜಗತ್ತು ಅದು. ಊರಿನ ಹೋಟೆಲಿಗೆ, ಮುತ್ತಿನಮ್ಮನ ಗುಡಿಗೆ ದಲಿತರಿಗೆ ಪ್ರವೇಶವಿಲ್ಲ ಎನ್ನುವುದು ಆ ತಾರತಮ್ಯಗಳ ಜಗತ್ತಿನಲ್ಲಿನ ಒಂದು ಭಾಗ ಅಷ್ಟೆ. ಹೊಲೆಯರು ದೇವಸ್ಥಾನ ಪ್ರವೇಶಿಸಿದರೆ ಅವರನ್ನು ಮುತ್ತಿನಮ್ಮ ಸುಟ್ಟು ಹಾಕುತ್ತಾಳೆ ಎನ್ನುವ ಹೆದರಿಕೆಯನ್ನು ಬಿತ್ತಿ ಮೌಢ್ಯವೊಂದರ ಮೂಲಕ ಹೊಲೆಯರ ಕನಸುಗಳನ್ನು ಸುಟ್ಟುಹಾಕಲಾಗಿದೆ. ರಮೇಶ ವಿದ್ಯಾವಂತನಾಗಿದ್ದರೂ, ಸರ್ಕಾರಿ ನೌಕರನಾಗಿದ್ದರೂ ಇನ್ನೂ ಆಗಲೋ ಈಗಲೋ ಬೀಳುವ ಸ್ಥಿತಿಯ ಹುಲ್ಲಿನ ಜೋಪಡಿಯಲ್ಲಿಯೇ ಇದ್ದಾನೆ. ಸ್ವಂತದ್ದೊಂದು ಚೊಕ್ಕಟ ಮನೆಯನ್ನು ಕಟ್ಟಿಕೊಳ್ಳುವ ಧೈರ್ಯವೂ ಅವನಿಗಿಲ್ಲ.

ನಿರೂಪಕ ಮತ್ತು ರಮೇಶ ನೆರೆಯ ಊರಿನಲ್ಲಿದ್ದ ರಮೇಶನ ನೆಂಟರ ಮನೆಗೆ ಹೋಗಿ ಹಿಂದಿರುಗುವಾಗ ಜೋರು ಮಳೆಗೆ ಸಿಲುಕಿಕೊಳ್ಳುತ್ತಾರೆ. ಅದರಿಂದ ಪಾರಾಗಲು ಈ ಊರಿನ ಮುತ್ತಿನಮ್ಮನ ಗುಡಿಯ ಹಿಂದೆ ಗೋಡೆಯ ಆಶ್ರಯದಲ್ಲಿ ನಿಲ್ಲುತ್ತಾರೆ. ಮಳೆ ಬಿರುಸಾದಂತೆ ಅಲ್ಲಿಂದ ಗುಡಿಯ ಬಾಗಿಲಿಗೆ ಬರುತ್ತಾರೆ. ಹೊಲೆಯರು ಗುಡಿಯ ಬಾಗಿಲಿನಲ್ಲಿ ನಿಲ್ಲುವುದೂ ಆ ಊರಿನ ಜನರ ಪ್ರಕಾರ ಘೋರ ಅಪರಾಧ. ಆದರೆ ಆ ಬಿರುಮಳೆಯಲ್ಲಿ, ಕತ್ತಲಿನಲ್ಲಿ ಇವರನ್ನು ಯಾರೂ ನೋಡುವ ಸಾಧ್ಯತೆ ಇರಲಿಲ್ಲ. ಮಳೆ ಇರುಚಲು ಇನ್ನಷ್ಟು ಹೆಚ್ಚಾದ್ದರಿಂದ ತೊಯ್ದು ತೊಪ್ಪೆಯಾಗಿ ಅನಿವಾರ್ಯವಾಗಿ ಗುಡಿಯೊಳಗೆ ಅಳುಕುತ್ತಲೇ ಬರುತ್ತಾರೆ. ತಪ್ಪು ಮಾಡಿದೆವೆನ್ನುವ ಭಾವದ ನಡುವೆಯೂ ಗುಡಿಯೊಳಗೆ ಬಂದ ಊರಿನ ಮೊದಲ ಹೊಲೆಯರು ಎಂಬ ವಿಚಿತ್ರ ಖುಷಿ ಅವರಿಗೆ. ಅದರೊಂದಿಗೆ ಧರ್ಮ, ದೇವರು ಎಲ್ಲವೂ ತಾವು ಹೊಲೆಯರೆನ್ನುವ ಕಾರಣಕ್ಕಾಗಿಯೇ ತಮ್ಮಿಂದ ಇಷ್ಟು ದಿನ ತಮ್ಮಿಂದ ದೂರ ಉಳಿದಿದ್ದವೆನ್ನುವ ಕುದಿ ಕೋಪವೂ ಅವರಲ್ಲಿ ಕಾಣಿಸಿಕೊಳ್ಳುತ್ತದೆ. ರಮೇಶ

ದೇವರ ಹತ್ತಿರಕ್ಕೆ ಹೋಗುತ್ತಾನೆ. ಅದೆಲ್ಲಿತ್ತೋ ಆಕ್ರೋಶ ದೇವರ ಮೂರ್ತಿಯ ಮೇಲೆ ಕ್ಯಾಕರಿಸಿ ಉಗಿಯುತ್ತಾನೆ. ನಿರೂಪಕನೂ ಹುಡುಗಾಟಕ್ಕೆನ್ನುವಂತೆ ತನ್ನ ಚಪ್ಪಲಿ ತೆಗೆದು ದೇವರ ವಿಗ್ರಹದ ಮೇಲಿಡುತ್ತಾನೆ. ಇಷ್ಟು ಶತಮಾನಗಳಿಂದ ದೇವರಿಗೇ ಬೇಡವಾಗಿದ್ದ, ದೇವಸ್ಥಾನಕ್ಕೆ ಕಾಲಿಡಲೂ ಅವಕಾಶವಿರದ ಅವರಿಗೆ ದೇವರ ಭಕ್ತಿಯೂ ಇರಲಿಲ್ಲ. ಆದರೆ ತಾರತಮ್ಯದ, ಅವಮಾನದ ನೋವಿನ ಸೆಲೆ ಅವರ ಸುಪ್ತಮನಸ್ಸಿನಲ್ಲಿ ಅದೆಷ್ಟು ಆಳವಾಗಿತ್ತೋ ಏನೋ. ತಾವೇನು ಮಾಡುತ್ತಿದ್ದೇವೆನ್ನುವ ಅರಿವೇ ಇಲ್ಲದವರಂತೆ ಅವರು ಹಾಗೆ ಸಿಡಿದಿದ್ದರು.

ಇನ್ನೊಂದೆಡೆ, ಅಸ್ಪೃಶ್ಯತೆಯ ಅವಮಾನದಿಂದ ಪಾರಾಗಲು ಊರಿನಲ್ಲಿ ಕೆಲವರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿದ್ದಾರೆ. ಅವರಲ್ಲಿ ಒಬ್ಬ ಜೋಸೆಫ್‌ರಾಜ್. ತಾನು ಕ್ರಿಶ್ಚಿಯನ್ ಆಗಿದ್ದಕ್ಕೆ ಹಾಗೂ ಹಿಂದೂ ಧರ್ಮದ ಜಾತಿ ತಾರತಮ್ಯದ ಅವಮಾನಗಳಿಂದ ಮುಕ್ತಿ ಸಿಕ್ಕಿದ್ದಕ್ಕೆ ಹೆಮ್ಮೆಪಡುತ್ತಿದ್ದಾನೆ. ಹಾಗಾಗಿ ಇನ್ನಷ್ಟು ಹೊಲೆಯರನ್ನು ಕ್ರಿಶ್ಚಿಯನ್ನರನ್ನಾಗಿಸುವ ಹುಮ್ಮಸ್ಸಿನಲ್ಲಿದ್ದಾನೆ. ಆದರೆ ಕ್ರಿಶ್ಚಿಯನ್ ಧರ್ಮದಲ್ಲಿ ಪ್ರಸ್ತುತ ಅವನ ಸ್ಥಾನಮಾನವೇನು ಎಂದು ನಿರೂಪಕ ಪ್ರಶ್ನಿಸಿದಾಗ ಉತ್ತರಿಸಲಾಗದೆ ಜೋಲು ಮೋರೆ ಹಾಕುತ್ತಾನೆ. ಹಾಗೆಯೇ ಇನ್ನೊಂದು ನೋವನ್ನು ಕೂಡ ಹಂಚಿಕೊಳ್ಳುತ್ತಾನೆ. ಅವನು ಒಮ್ಮೆ ತಾನು ಕ್ರಿಶ್ಚಿಯನ್ ಆಗಿರುವುದರಿಂದ ಹೊಲೆಯನಲ್ಲ, ತನಗೆ ಹಿಂದೂ ಧರ್ಮದ ಅಸ್ಪೃಶ್ಯತೆ ಅನ್ವಯಿಸುವುದಿಲ್ಲವೆಂದು ಭಾವಿಸಿ ಊರಿನ ಹೋಟೆಲಿನಲ್ಲಿ ಕುಳಿತಿದ್ದನಂತೆ. ಆದರೆ ಅವನ ಅನಿಸಿಕೆ ಸುಳ್ಳಾಗಿತ್ತು. ನೀನು ಕ್ರಿಶ್ಚಿಯನ್ನನಾಗಿ ಬದಲಾಗಿರಬಹುದು. ಆದರೆ ಮೂಲತಃ ಹೊಲೆಯನೇ ಅಲ್ಲವೇ ಎಂದು ಸವರ್ಣೀಯರು ತನ್ನನ್ನ ಹಿಗ್ಗಾಮುಗ್ಗಾ ಥಳಿಸಿದ್ದನ್ನೂ, ಅವರಿಗೆ ಇವನ ಹಳೆಯ ಜಾತಿಯ ಗುರುತೇ ಮುಖ್ಯವಾಗಿದ್ದನ್ನೂ ಹೇಳುತ್ತ ವ್ಯಥೆಪಡುತ್ತಾನೆ. ಹಾಗೆಯೇ ಕ್ರಿಶ್ಚಿಯನ್ನರಲ್ಲಿಯೂ ಮತಾಂತರವಾದ ಹೊಲೆಯರ ಹಳೆಯ ಜಾತಿಯ ಗುರುತೇ ಮುಖ್ಯವಾಗಿರುವುದು ನಿರೂಪಕನಿಗೆ ತಿಳಿದಿದೆ.

ಅದಾದ ಆರು ವರ್ಷಗಳ ನಂತರ, ನಿರೂಪಕ ಅದೇ ಊರಿಗೆ ಮತ್ತೊಮ್ಮೆ ಹೋದಾಗ ಜೋಸೆಫ್‌ರಾಜ್ ಎದುರಾಗುತ್ತಾನೆ. ನಂತರ ನಿರೂಪಕರು ಹೊಲೆಯರ ಕೇರಿಗೆ ಹೋದರೆ ಅಲ್ಲಿನ ವಾತಾವರಣವೇ ಪೂರ್ಣ ಬದಲಾಗಿರುತ್ತದೆ. ಜೋಸೆಫ್ ಸೇರಿದಂತೆ ಬಹುತೇಕರು ಮುಸ್ಲಿಮರಂತೆ ಕಾಣುತ್ತಿದ್ದಾರೆ. ಅವರ ಮನೆಗಳ ಮೇಲೆ ಹಸಿರು ಬಾವುಟ, ಅವರ ತಲೆಯ ಮೇಲೆ ಟೋಪಿ, ಪಾಯಿಜಾಮ-ಶರಟುಗಳ ವೇಷಭೂಷಣ. ಅವರೆಲ್ಲ ಇಸ್ಲಾಂ ಧರ್ಮಕ್ಕೆ ಮತಾಂತರವಾಗಿದ್ದಾರೆ. ತನ್ನನ್ನು ಜೋಸೆಫ್ ಎನ್ನುವ ಹೆಸರಿನಿಂದ ಕರೆಯಬೇಡಿ. ತಾನೀಗ ಸಲೀಂ ಎಂದ ಜೋಸೆಫ್. ಕ್ರಿಶ್ಚಿಯನ್ ಧರ್ಮ ಬಿಟ್ಟಿದ್ದಕ್ಕೆ ಕಾರಣ ಕೇಳಿದರೆ 'ಅವರಿಗೆ ತಾಕತ್ತಿಲ್ಲ. ಫಾದರ್ ಸಿಸ್ಟರ್ ಅಂದ ಮಾತ್ರಕ್ಕೆ ಏನೂ ಆಗಲ್ಲ. ಬೋಸುಡೀ ಮಗನೇ ಮಾದರ್ ಚೋದ್ ಅನ್ನಬೇಕು' ಎನ್ನುತ್ತಾನೆ ಜೋಸೆಫ್. ಅವನಿಗೆ ತಾನು ಕ್ರಿಶ್ಚಿಯನ್ ಆಗಿದ್ದಾಗ ಹಿಂದೂ ಸವರ್ಣೀಯರಿಂದ ತಿಂದ ಪೆಟ್ಟಿನ ನೆನಪು ಇನ್ನೂ ಹಸಿರಾಗಿಯೇ ಇದೆ. ಜೋಸೆಫ್‌ನ

ಪರಿವಾರ ತಕ್ಕಮಟ್ಟಿಗೆ ಖುಷಿಯಾಗಿಯೇ ಇದೆ. ಮುಸಲ್ಮಾನರಾಗಿ ಬದಲಾಗಿರುವ ಅವರ ಮಕ್ಕಳ ಕೈಯಲ್ಲಿನ ಬಟ್ಟಲುಗಳಲ್ಲಿ ಅವರನ್ನು ಮತಾಂತರ ಮಾಡಿಸಿದ ಮುಸಲ್ಮಾನ ಸಾಹುಕಾರನ ಮನೆಯಿಂದ ಬಂದ ಬಿರಿಯಾನಿ ಇದೆ. ಜೋಸೆಫ್ ಅಥವಾ ಸಲೀಮನ ಮನೆಯಲ್ಲಿ ಸಂಪೂರ್ಣ ಮುಸ್ಲಿಂ ವಾತಾವರಣವಿದೆ. ಅವರ ಮನೆಯಲ್ಲಿ ಹೆಣ್ಣು ಮಕ್ಕಳನ್ನು ಗುರುತಿಸಲೂ ಆಗುವುದಿಲ್ಲ. ಅವರ ಗುರುತುಗಳು ಅವರು ಧರಿಸಿರುವ ಬುರ್ಕಾದಲ್ಲಿ ಮರೆಯಾಗಿವೆ. ಬಹುಶಃ ಅವರೆಲ್ಲ ಇನ್ನೂ ಹೊಲೆಯನಾಗಿ ಉಳಿದು ಅಸ್ಪೃಶ್ಯತೆಯ ಅವಮಾನವನ್ನು ಹೊತ್ತು ತಿರುಗುತ್ತಿರುವ ತನ್ನನ್ನು ನೋಡಿ ಬುರ್ಕಾದೊಳಗಿನಿಂದಲೇ ನಗುತ್ತಿರಬಹುದು ಎಂದು ನಿರೂಪಕ ಅಂದುಕೊಳ್ಳುತ್ತಾನೆ.

ಇಸ್ಲಾಂಗೆ ಮತಾಂತರವಾಗಿರುವ ಈ ದಲಿತರು ಅಲ್ಲಿಯೂ ನೆಮ್ಮದಿಯಾಗಿ ಇರಬಲ್ಲರು ಎನ್ನುವ ಭರವಸೆ ಕತೆಗಾರನಿಗಿಲ್ಲ. ಅದು ಬಾಣಲೆಯಿಂದ ಬೆಂಕಿಗೆ ಸ್ಥಿತಿಯಂತಾಗಬಹುದು ಎನ್ನುವ ಅವ್ಯಕ್ತ ಆತಂಕವೂ ಇದೆ. ಈ ಹಳ್ಳಿಯಲ್ಲಿ ಹಿಂದೂ ಸವರ್ಣೀಯರ ಮನ್ನಣೆ ಪಡೆದಿರುವ ಮುಸ್ಲಿಮರು, ಈ ಮತಾಂತರಿತ ಮುಸ್ಲಿಮರನ್ನು ಹೇಗೆ ನಡೆಸಿಕೊಳ್ಳಬಹುದು ಎನ್ನುವುದೂ ಒಂದು ಯಕ್ಷಪ್ರಶ್ನೆ. ಯಾಕೆಂದರೆ, ಹಿಂದೂ ಅಸ್ಪೃಶ್ಯತೆಯ ಮನಸ್ಥಿತಿಯನ್ನು ಮೈಗಂಟಿಸಿಕೊಂಡಿದ್ದ ಬಹುತೇಕ ಎಲ್ಲ ಧರ್ಮೀಯರೂ ಅಂಬೇಡ್ಕರ್ ರವರನ್ನು ಯಾವ ರೀತಿ ನಡೆಸಿಕೊಂಡರು ಎನ್ನುವುದು ಕಣ್ಣ ಮುಂದೆ ಸುಳಿದರೆ, ತಕ್ಷಣದ ಕಷ್ಟದಿಂದ ಪಾರಾಗಲು ಬೇರೆ ಬೇರೆ ಧರ್ಮಗಳಿಗೆ ಮತಾಂತರವಾಗುವ ದಲಿತರು ಎದುರಿಸಬಹುದಾದ ಕಷ್ಟಗಳು ದಿಗಿಲು ಹುಟ್ಟಿಸುತ್ತವೆ.

ಘೋರ ಅವಮಾನದ ಜಗತ್ತನ್ನು ಚಿತ್ರಿಸುವಾಗಲೂ ತಣ್ಣಗಿನ ದಾಟಿಯಲ್ಲಿ ನಿರೂಪಿತವಾಗಿರುವ ಈ ಕತೆಯಲ್ಲಿ ಹಳ್ಳಿಗಳ ಬಗೆಗೆ ಗಾಂಧಿಯ ಆದರ್ಶವಾದಿ ದೃಷ್ಟಿಕೋನ ಮತ್ತು ಹಳ್ಳಿಗಳ ಕ್ರೌರ್ಯವನ್ನು ಕುರಿತಂತೆ ಅಂಬೇಡ್ಕರ್ ತಳೆದಿರುವ ವಾಸ್ತವದರಿವಿನ ದೃಷ್ಟಿಕೋನ ಸೂಚ್ಯವಾಗಿ ಬಂದುಹೋಗುತ್ತದೆ. ಹಾಗೆಯೇ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಭಾರತೀಯ ಸಮಾಜದ ಜಾತಿ ತಾರತಮ್ಯ ಮತ್ತು ದೌರ್ಜನ್ಯಗಳು ಎಂದಿಗೂ ಬದಲಾಗದ ವಾಸ್ತವ ಎನ್ನುವುದನ್ನು ಕತೆ ಅತ್ಯಂತ ಖಚಿತವಾಗಿ ದಾಖಲಿಸುತ್ತದೆ. ಅದರೊಂದಿಗೆ, ಭಾರತೀಯ ಸಮಾಜದ ಜಾತಿಕ್ರೌರ್ಯ ಮತ್ತು ಜಡತೆಯ ಬಗ್ಗೆ ಅಂಬೇಡ್ಕರ್ ರವರ ಗ್ರಹಿಕೆಯೇ ಭಾರತದಲ್ಲಿ ಸದಾ ಕಾಲ ಕ್ರಿಯಾಶೀಲವಾಗಿರುವಂತದ್ದು ಎನ್ನುವುದು ಸ್ಪಷ್ಟವಾಗುತ್ತದೆ. ಹಾಗೆಯೇ ಜಾತೀಯ ಅವಮಾನಗಳಿಂದ ಪಾರಾಗಲು ದಲಿತರು ಆರಿಸಿಕೊಳ್ಳುವ ಮತಾಂತರದ ದಾರಿಗಳು ಕೂಡ ಹೇಗೆ ತಕ್ಷಣದ ಆಯ್ಕೆಗಳು ಮಾತ್ರ ಆಗಬಲ್ಲವು ಎನ್ನುವುದನ್ನೂ ಕತೆ ಸೂಕ್ಷ್ಮವಾಗಿ ದಾಖಲಿಸುತ್ತದೆ. ಧರ್ಮ ಬದಲಾವಣೆಯ ಕುರಿತಂತೆ ಅಂಬೇಡ್ಕರ್ ಯಾಕೆ ಅಷ್ಟು ಪ್ರಜ್ಞಾಪೂರ್ವಕವಾದ ಮತ್ತು ಎಚ್ಚರದ ನಡೆ ಇಟ್ಟರು ಎನ್ನುವುದು ಕೂಡ ಗಂಭೀರವಾಗಿ ಚಿಂತಿಸಬೇಕಾದ ಸಂಗತಿಯಾಗಿ ಕಾಣುತ್ತದೆ.

ಪರಾಮರ್ಶನ ಗ್ರಂಥಗಳು:

1. ಗಿರಡ್ಡಿ ಗೋವಿಂದರಾಜ, (೨೦೦೯), ಕಲ್ಪಿತ ವಾಸ್ತವ: ಕನ್ನಡ ಸಣ್ಣಕತೆ, ಹುಬ್ಬಳ್ಳಿ: ಸಾಹಿತ್ಯ ಪ್ರಕಾಶನ.
2. ಅಶೋಕ ಟಿ.ಪಿ., (೨೦೧೨), ಸಾಹಿತ್ಯ ಸಂಚಾರ, ಹೆಗ್ಗೋಡು: ಅಕ್ಷರ ಪ್ರಕಾಶನ.
3. ಅಮೂರ ಜಿಎಸ್., (೨೦೦೪), ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ, ಬೆಂಗಳೂರು: ಅಂಕಿತ ಪುಸ್ತಕ.
4. ಅಮರೇಂದ್ರ ಹೊಲ್ಲಂಬಳ್ಳಿ, (೨೦೨೧), ಕನ್ನಡ ಸಣ್ಣಕತೆಗಳು ಮತ್ತು ಜಾಗತೀಕರಣ, ಬೆಂಗಳೂರು: ಐಸಿರಿ ಪ್ರಕಾಶನ.

Funding:

This study was not funded by any grant.

Conflict of interest:

The Authors have no conflict of interest to declare that they are relevant to the content of this article.

About the License:

© The Authors 2024. The text of this article is open access and licensed under a Creative Commons Attribution 4.0 International License.